


ನೋಟರಿ ಇಲ್ಲವೇ ಗೆಜೆಟೆಡ್ ಅಧಿಕಾರಿಯಿಂದ ದೃಢೀಕರಣ ಮಾಡಬೇಕು. ನಂತರ ಅವರು ಅದನ್ನು ಸ್ಥಳೀಯ ಆಡಳಿತದಿಂದ ನೇಮಕವಾಗಿರುವ ಸಂಬಂಧಪಟ್ಟ ಅಧಿಕಾರಿಗೆ ಕಳಿಸಬೇಕು. ಮರಣ ಇಚ್ಛೆಯ ಉಯಿಲನ್ನು ಯಾವುದೇ ಹಂತದಲ್ಲಿ ಬೇಕಿದ್ದರೂ ಹಿಂಪಡೆಯುವ ಅಧಿಕಾರ ಉಯಿಲು ಬರೆದವರಿಗೆ ಇರುತ್ತದೆ.

## ದುರುಪಯೋಗದ ಸಾಧ್ಯತೆ

ವಾಸಿಯಾಗದ ಗಂಭೀರ ಕಾಯಿಲೆಪೀಡಿತರು, ಕಾಯಿಲೆಗಳಿಂದ ನೊಂದವರು ಇಲ್ಲವೇ ಅವರ ಕುಟುಂಬಸ್ಥರು ವ್ಯಕ್ತಿಯ ಆರೈಕೆ ಮಾಡಲಾಗದೇ ದಯಾಮರಣದ ತೀರ್ಮಾನ ಕೈಗೊಳ್ಳುವ ಸಾಧ್ಯತೆಯನ್ನು ತಳ್ಳಿಹಾಕುವಂತಿಲ್ಲ. ರೋಗಪೀಡಿತನಾಗಿರುವ ವ್ಯಕ್ತಿಯ ಆಸ್ತಿ ಪಡೆಯುವ ದುರುದ್ದೇಶದಿಂದಲೂ ಕೆಲವರು ಇಂಥ ಮರಣವನ್ನು ರೋಗಿಯ ಪರವಾಗಿ ಕೋರುವ ಸಾಧ್ಯತೆ ಇರಬಹುದು. ಇದಕ್ಕಾಗಿ ವೈದ್ಯರು ಮತ್ತು ಸಂಬಂಧಪಟ್ಟವರನ್ನು ಹಣ ಹಾಗೂ ಇತರ ಆಮಿಷ ಒಡ್ಡಿ ಸುಳ್ಳು ಪ್ರಮಾಣಪತ್ರ ಪಡೆಯುವ ಸಾಧ್ಯತೆಯೂ ಇರುತ್ತದೆ ಎಂಬ ಆತಂಕ ಹಲವರದ್ದು.

ಉದ್ಯೋಗದಲ್ಲಿರುವಾಗಲೇ ಸತ್ತರೆ ತಮ್ಮ ಮಕ್ಕಳಿಗೆ ಅನುಕಂಪದ ನೌಕರಿ ದೊರೆಯುತ್ತದೆಂಬ ಉದ್ದೇಶದಿಂದ ಕೆಲವರು ಸಾವಿನ ಯೋಚನೆ ಮಾಡಿರುವ ಉದಾಹರಣೆಗಳಿವೆ. ಕೆಲವರು ದೊಡ್ಡ ಮೊತ್ತದ ವಿಮೆ ಬರುತ್ತದೆ ಎಂದೋ ಇಂಥ ಕೆಲಸಕ್ಕೆ ಕೈ ಹಾಕಿರುವುದಿದೆ. ಹಾಗಾಗಿ, ದಯಾಮರಣದ ನಿರ್ಧಾರದ ಹಿಂದೆ ಯಾವುದಾದರೂ ಸ್ವಾರ್ಥದ ಉದ್ದೇಶ ಇದೆಯೇ ಎಂಬುದನ್ನು ವಿಶ್ಲೇಷಿಸಬೇಕು.

‘ಆತ್ಮಹತ್ಯೆ ಮಾಡಿಕೊಂಡರೆ ವಿಮೆ ಬರುವುದಿಲ್ಲ, ಅನುಕಂಪದ ನೌಕರಿಯೂ ದೊರೆಯುವುದಿಲ್ಲ. ಅಂತೆಯೇ ದಯಾಮರಣಕ್ಕೆ ಕಾನೂನು ಮಾನ್ಯತೆ ಮಾಡಿದರೆ ವಿಮೆ ಪರಿಹಾರದ ಸಾಧ್ಯತೆಗಳಿವೆಯೇ ಎಂಬುದನ್ನೂ ವಿಶ್ಲೇಷಿಸಬೇಕಾಗುತ್ತದೆ’ ಎನ್ನುತ್ತಾರೆ ನಿಮ್ಹಾನ್ಸ್‌ನ ಮನೋರೋಗ ತಜ್ಞ ಡಾ. ಶಶಿಧರ ಎಚ್.ಎನ್.

## ದಯಾಮರಣದ ಹಾದಿ


ಭಾರತದಲ್ಲಿ ದಯಾಮರಣದ ಕುರಿತ ಹೋರಾಟಕ್ಕೆ ಸುಮಾರು ನಾಲ್ಕು ದಶಕಗಳಷ್ಟು ಇತಿಹಾಸವಿದೆ. 80ರ ದಶಕದಲ್ಲೇ ದಯಾಮರಣ ಕುರಿತು ಕಾನೂನು ರೂಪಿಸುವ ಕುರಿತು

## ದುರುಪಯೋಗ ಸಾಧ್ಯತೆ: ಎಚ್ಚರಿಕೆ ಅಗತ್ಯ

ಯಾವುದೇ ವ್ಯಕ್ತಿಗೆ ತನ್ನ ಬದುಕಿನ ಬಗ್ಗೆ ತಾನೇ ತೀರ್ಮಾನಿಸುವ ಸ್ವಾತಂತ್ರ್ಯವಿದೆ. ಅಂತೆಯೇ ಸ್ವಯಂ ತಾನೇ ಮರಣ ಬಯಸಿದರೆ ತಪ್ಪೇ? ಅದೆಷ್ಟು ಸರಿ, ಅದೆಷ್ಟು ತಪ್ಪು?

ಸುಪ್ರೀಂ ಕೋರ್ಟ್ ದಯಾಮರಣದ ಬಗ್ಗೆ ನೀಡಿರುವ ತೀರ್ಪಿನ ಹಿಂದೆ ಸುಮಾರು ನಾಲ್ಕು ದಶಕಗಳ ಹೋರಾಟದ ಇತಿಹಾಸವಿದೆ. ಯುಥನೇಸಿಯಾ ಬಗ್ಗೆ ಸಾಕಷ್ಟು ಪರ ವಿರೋಧದ ಚರ್ಚೆಗಳಿವೆ.

ದಯಾಮರಣವೆನ್ನುವುದು ಜೀವ ವಿರೋಧಿ. ಹಾಗಾಗಿ ಯುಥನೇಸಿಯಾ ತಪ್ಪು ಎಂದು ವಾದಿಸುವವರಿದ್ದಾರೆ. ಅದು ಬದುಕಿನ ಪರ ಎಂಬ ವಾದವೂ ಇದೆ.



ಹುಟ್ಟು ಹಾಗೂ ಸಾವು ನೈಸರ್ಗಿಕ ನಿಯಮ. ದಯಾಮರಣ ಅನೈಸರ್ಗಿಕವಾದಂಥದ್ದು. ಹಾಗಾಗಿ ಸಲ್ಲದು, ಅಂಥ ಸಾವಿಗೆ ಪರವಾನಗಿ ಕೊಡುವುದು ಕೊಲೆಗೆ ಸಮ ಎಂಬ ವಾದವೂ ಇದೆ. ಹಾಗೆಯೇ ಹುಟ್ಟು ಹೇಗೋ, ಪ್ರತಿಯೊಬ್ಬ ವ್ಯಕ್ತಿಗೆ ಘನತೆಯ ಸಾವೂ ಅಷ್ಟೇ ಮುಖ್ಯ ಎಂಬ ವಾದವಿದೆ. ಸಾವೂ ಸಹನೀಯವಾಗಿರಬೇಕು. ದಯಾಮರಣ ಘನತೆಯ ಸಾವಿಗೆ ಅನುವು ಮಾಡಿಕೊಡುತ್ತದೆ. ದಯಾಮರಣದ ಈ ತೀರ್ಪು ದುರುಪಯೋಗವಾಗದಂತೆ ನೋಡಿಕೊಳ್ಳುವುದು ಸರ್ಕಾರದ, ವ್ಯವಸ್ಥೆಯ ಹಾಗೂ ನಮ್ಮ ನಿಮ್ಮೆಲ್ಲರ ಕರ್ತವ್ಯವಾಗಿದೆ.

**-ಬಿ.ಟಿ. ವೆಂಕಟೇಶ್,**
ವಕೀಲರು